ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5 Issue 2, September-October, 2023, Pp. 70-78.**
**©*IIMRD*, Mysuru**

IIMRD JOURNALS

**www.iimrd.com**

# ವಿದುರನೀತಿ ಅನ್ವಯ ರಾಜನು ಅಧೀನ ಅಧಿಕಾರಿಗಳ ನೇಮಕದಲ್ಲಿ ಅನುಸರಿಸುವ ನಿಯಮಗಳು

**ಡಾ. ಎಸ್.ವಿ.ಮನಗುಂಡಿ***

*ಸಹ ಪ್ರಾಧ್ಯಾಪಕರು, ಶ್ರೀ ಸಿದ್ಧೇಶ್ವರ ಸರಕಾರಿ ಪ್ರಥಮ ದರ್ಜೆ ಕಾಲೇಜು, ನರಗುಂದ, ಗದಗ ಜಿಲ್ಲೆ.

**ಸಾರಾಂಶ: (Abstract)**

*ಕುಮಾರವ್ಯಾಸ ಭಾರತದ ಉದ್ಯೋಗಪರ್ವವು ಒಂದು ಮಹತ್ವದ ಕಥಾಭಾಗ. ಪಾಂಡವರು ಅಜ್ಞಾತವಾಸ ಪೂರ್ಣಗೊಳಿಸಿ 'ಉಪಪ್ಲಾವ' ಪಟ್ಟಣದಲ್ಲಿ ಬಿಡಾರ ಮಾಡಿಕೊಂಡು ಮುಂದಿನ ನಡೆ ಕುರಿತು ಚರ್ಚಿಸುತ್ತಾರೆ. ಈ ಕಡೆ ದುರ್ಯೋಧನನು ಯುದ್ಧ ಮಾಡುವ ಬಯಕೆಯಿಂದ ದೂತನನ್ನು ಕಳುಹಿಸಿ ಸುದ್ದಿ ಮುಟ್ಟಿಸಲು ಬಯಸಿದಾಗ, ಧೃತರಾಷ್ಟ್ರನಿಗೆ ನಿದ್ರೆ ಬಾರದೆ ಚಿಂತಾಕ್ರಾಂತನಾಗಿ ಮಧ್ಯರಾತ್ರಿಯಲ್ಲಿ ವಿದುರನನ್ನು ಕರೆಸಿಕೊಂಡು ಸಲಹೆ ಕೋರುತ್ತಾನೆ. ವಿದುರನು ಧೃತರಾಷ್ಟ್ರನಿಗೆ ರಾಜಕುಟುಂಬ, ಪ್ರಜೆ, ಅಧಿಕಾರಿ ವರ್ಗ ಈ ಕುರಿತು ಧರ್ಮಶಾಸ್ತ್ರದ ಹಿನ್ನೆಲೆಯಲ್ಲಿ ಉನ್ನತ ವಿಚಾರಗಳನ್ನು ತಿಳಿಸಿಕೊಡುತ್ತಾನೆ. ಈ ಉಪದೇಶವು 'ವಿದುರನೀತಿ' ಎಂದು ಪ್ರಸಿದ್ಧವಾಗಿದೆ. ಈ ನೀತಿಯಲ್ಲಿ ರಾಜನು ಅಧೀನ ಅಧಿಕಾರಿಗಳ ನಿಯೋಜನೆಯಲ್ಲಿ ಅನುಸರಿಸಬಹುದಾದ ನೀತಿ ನಿಯಮಗಳ ಕುರಿತು ಕುಮಾರವ್ಯಾಸನು ಉದ್ಯೋಗಪರ್ವದಲ್ಲಿ ಸಂಧಿ ಮೂರರಲ್ಲಿ 86ನೇ ಪದ್ಯದಿಂದ 106ನೇ ಪದ್ಯವರೆಗೆ ಪ್ರಸ್ತಾಪಿಸಿದ್ದಾನೆ. ಆ ನೀತಿ ವಿಚಾರಗಳ ಕುರಿತು ಅವಲೋಕನ ಕಾರ್ಯವು ಈ ಲೇಖನದ ಉದ್ದೇಶ.*

**ಮುಖ್ಯಪದಗಳು (Keywords):** ವಿದುರನೀತಿ ಮಂತ್ರಿ, ಸಂಧಿವಿಗ್ರಹಿ, ರಾಹುತ, ಕೋಶಾಧಿಕಾರಿ, ಸೇನಾಪತಿ, ಸೂಪಕಾರ, ಆಪ್ತಸೇವಕ ಸ್ವಾಮಿನಿಷ್ಠೆ, ಒಡೆಯ, ಸೇವಕ, ಚತುರಂಗಬಲ.

## ಪೀಠಿಕೆ

ಮಹಾಕವಿ ಕುಮಾರವ್ಯಾಸನ 'ಕರ್ನಾಟ ಭಾರತ ಕಥಾ ಮಂಜರಿ'ಯ ಉದ್ಯೋಗಪರ್ವದ ವಿದುರನೀತಿಯ ಪ್ರಕಾರ ರಾಜನು ಅಧೀನ ಅಧಿಕಾರಿವರ್ಗದ ನೇಮಕ ಸಂದರ್ಭದಲ್ಲಿ ಕೈಗೊಳ್ಳಬೇಕಾದ ನೀತಿ ನಿಯಮಗಳು ವಿದುರನೀತಿಯಲ್ಲಿ ಸ್ಪಷ್ಟವಾಗಿ ನಿರೂಪಿಸಿರುವುದು ಗಮನಾರ್ಹವಾದವು. ಮಹಾಭಾರತದಲ್ಲಿ ಉದ್ಯೋಗಪರ್ವವು ಒಂದು ಮಹತ್ವದ ಕಥಾಭಾಗ. ಉದ್ಯೋಗ ಎಂದರೆ ಸೇನೆಯ ಸಂಗ್ರಹ ಕಾರ್ಯ ಎಂದು ಅರ್ಥ ಮಾಡಲಾಗಿದೆ. ಪಾಂಡವರು ಅಜ್ಞಾತವಾಸ ಪೂರ್ಣಗೊಳಿಸಿ ಹಿಂತಿರುಗಿ ಬಂದ ನಂತರ ಅವರು ಬೀಡುಬಿಟ್ಟಿದ್ದು 'ಉಪಪ್ಲಾವ' ಎಂಬ ನಗರವನ್ನು ಹೊಸದಾಗಿ ನಿರ್ಮಿಸಿ ವಾಸಸ್ಥಾನವನ್ನಾಗಿ ಮಾಡಿಕೊಳ್ಳುತ್ತಾರೆ. 'ಗಟ್ಟಿಗರು ಬಿಟ್ಟಲ್ಲಿ ಪಟ್ಟಣ' ಎಂಬ ನಾಣ್ಣುಡಿಯಂತೆ ಅವರು

*Please cite this article as: ಮನಗುಂಡಿ. ಎಸ್.ವಿ.* (2023). ವಿದುರನೀತಿ ಅನ್ವಯ ರಾಜನು ಅಧೀನ ಅಧಿಕಾರಿಗಳ ನೇಮಕದಲ್ಲಿ ಅನುಸರಿಸುವ ನಿಯಮಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(2). ಪು.ಸಂ.* 70–78.

ಉಪಪ್ಲಾವ ನಗರದಲ್ಲಿ ಮಂತ್ರಾಲೋಚನೆ ಮಾಡಿ ತಮ್ಮ ಆಪ್ತರಾದವರನ್ನು ಕರೆದು ಓಲಗ ನಡೆಸಿ ಮುಂದಿನ ನಡೆ ಹೇಗೆ ಎಂದು ಒಂದು ಒಮ್ಮತಕ್ಕೆ ಬರಲು ಪ್ರಯತ್ನಿಸುತ್ತಾರೆ. ಈ ವಿಚಾರವು ಗೂಢಚಾರರ ಮೂಲಕ ದುರ್ಯೋಧನನಿಗೆ ತಲುಪುತ್ತದೆ. ಆ ಪಾಳೆಯದಲ್ಲೂ ಚರ್ಚೆ ಮಂಥನಗಳು ನಡೆದು ದುರ್ಯೋಧನನು ಯಾದವರ ಸೈನ್ಯವನ್ನು ತನ್ನ ಪಕ್ಷಕ್ಕೆ ಸೇರಿಸಿಕೊಂಡು ಯುದ್ಧ ಸನ್ನದ್ಧರಾಗುವ ಬಯಕೆಯನ್ನು ಸಂಜಯನ ಮೂಲಕ ಕಳುಹಿಸುತ್ತಾರೆ. ಸಂಜಯನು ಸುದ್ದಿಯನ್ನು ಹೊತ್ತು ಪಾಂಡವರಲ್ಲಿಗೆ ಹೋಗಿ ತನ್ನ ಕಾರ್ಯ ಕೈಗೊಂಡು ಹಿಂತಿರುಗುತ್ತಾನೆ. ಈ ಕಡೆ ಧೃತರಾಷ್ಟ್ರನು ಚಿಂತಾಕ್ರಾಂತನಾಗಿ ನಿದ್ರೆಯಿಂದ ಬಾಧಿತನಾಗಿ ಚರ್ಚೆಗೆ ವಿದುರನನ್ನು ಕರೆಸಿಕೊಳ್ಳುತ್ತಾನೆ. ಸರಿ ರಾತ್ರಿಯವರೆಗೆ ವಿದುರನ ಉಪದೇಶವನ್ನು ಕೇಳುತ್ತಾನೆ. ವಿದುರನು ಧೃತರಾಷ್ಟ್ರನಿಗೆ ರಾಜ, ಕುಟುಂಬ ಪರಿವಾರ, ಅಧಿಕಾರಿ ವರ್ಗ, ಪ್ರಜೆಗಳ ಕುರಿತು ಸುದೀರ್ಘವಾಗಿ ತಿಳಿ ಹೇಳುತ್ತಾನೆ. ಈ ಉಪದೇಶವು ವಿದುರ ನೀತಿಯೆಂದು ಪ್ರಸಿದ್ಧವಾಗಿದ್ದುದು ವಿಶೇಷ.

ಭರತಖಂಡದಲ್ಲಿ ರಾಜನೀತಿ ಮತ್ತು ಧರ್ಮಶಾಸ್ತ್ರದ ಬಗೆಗೆ ಉನ್ನತವಾದ ವಿಚಾರಗಳು ಪ್ರಾಚೀನಕಾಲದಿಂದಲೂ ಪ್ರಸಿದ್ಧವಾಗಿದ್ದು ಅವುಗಳನ್ನು ಹೆಸರಿಸಬೇಕೆಂದರೆ (1) ಕಾಮುಂದಕೀಯ ನೀತಿಸಾರ (2) ಬೃಹಸ್ಪತಿಸೂತ್ರ (3) ಶುಕ್ರನೀತಿ (4) ಚಾಣಕ್ಯನೀತಿ (5) ಸೋಮೇಶ್ವರನ ನೀತಿ ಸೂತ್ರ (6) ಮನುಸ್ಮೃತಿ ನೀತಿ ಹೀಗೆ ಶ್ರೇಷ್ಠವಾದ ನೈತಿಕ ತತ್ವಶಾಸ್ತ್ರ ವಿಚಾರಗಳು ಗಮನಾರ್ಹವಾದವುಗಳಾಗಿವೆ. ಅವುಗಳಲ್ಲಿ ಮಹಾಭಾರತದಲ್ಲಿ ಉಕ್ತವಾದ ವಿದುರನೀತಿಯೂ ಅತ್ಯಂತ ಪ್ರಮುಖವಾದ ರಾಜನೀತಿಯ ವಿವರಗಳು ಜನಾನುರಾಗಿಯಾಗಿದ್ದು ಸ್ಪಷ್ಟ.

ಪ್ರಸ್ತುತ ಲೇಖನದಲ್ಲಿ ಕುಮಾರವ್ಯಾಸ ಕವಿಯ 'ಕರ್ನಾಟ ಭಾರತ ಕಥಾಮಂಜರಿ'ಯ ಉದ್ಯೋಗ ಪರ್ವದ ಸಂಧಿ ಮೂರರಲ್ಲಿ 86ನೇ ಪದ್ಯದಿಂದ 106ನೇ ಪದ್ಯದವರೆಗೆ ರಾಜನಾದವನು ಅಧೀನ ಅಧಿಕಾರಿ ವರ್ಗದ ನೇಮಕ ಸಂದರ್ಭದಲ್ಲಿ ಅನುಸರಿಸುವ ನೀತಿ ನಿಯಮಗಳ ಕುರಿತು ವಿದುರನು ಧೃತರಾಷ್ಟ್ರ ಮಹಾರಾಜನಿಗೆ ಬೋಧನೆ ಕೈಗೊಳ್ಳುತ್ತಾನೆ. ಈ ಅಧಿಕಾರಿಗಳ ನೇಮಕದ ಅರ್ಹತೆ ಮುಂತಾದ ವಿವರಗಳನ್ನು ಅವಲೋಕನ ಮಾಡುವ ಉದ್ದೇಶ ಈ ಲೇಖನದ್ದಾಗಿದೆ.

***"ತಿಳುಹಿದನು ವಿದುರನು ಮಹಿಪತಿ***

***ತಿಲಕನನು ನಯನೀತಿ ಧರ್ಮಂ***

***ಗಳ ಸುಸಂಗತಿಯಿಂದ ನೂಕಿದರಿವರು ಯಾಮಿನಿಯ"***

ವಿದುರನು ರಾಜನಾದವನು ರಾಜ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ಧರ್ಮಸೂಕ್ಷ್ಮ ವಿಚಾರಗಳನ್ನು ವಿವರಿಸಿ, ಅವನನ್ನು ಎಚ್ಚರಿಸುವ ಕಾರ್ಯಕ್ಕೆ ಮುಂದಾಗುತ್ತಾನೆ. ಅಧೀನ ಅಧಿಕಾರಿಗಳ ಆಯ್ಕೆ ಸಂದರ್ಭದಲ್ಲಿ ಉನ್ನತ ಅಧಿಕಾರಿಯಾದ ಮಂತ್ರಿಯಿಂದ ಹಿಡಿದು, ಕೆಳಹಂತದ ಸೇವಕನವರೆಗೆ ಅನುಸರಿಸಬೇಕಾದ ವಿಚಾರಗಳನ್ನು ಸವಿವರವಾಗಿ ಪರಿಚಯಿಸಿದುದನ್ನು ಕಾಣುತ್ತೇವೆ. ರಾಜನು ಅಧಿಕಾರಿ ವರ್ಗದ ನೇಮಕ ಮಾಡುವಲ್ಲಿ (1) ಪೌರೋಹಿತ (2) ಮಂತ್ರಿ (3) ಸೇನಾಪತಿ, (4) ಸಂಧಿವಿಗ್ರಹಿ, (5) ಕೋಶಾಧಿಕಾರಿ, (6) ತಾಂಬೂಲಧಾರಕ (7) ಸೂಪಕಾರ (8) ಪಾನೀಯಧಾರಕ (9) ಪಡಿಹಾರಿ (10) ಮಲ್ಲ (11) ಚಮರಧಾರಕ (12) ಛತ್ರಿಧಾರಕ (13) ಅಂಗರಕ್ಷಕ (14) ವಾಹಕ (15) ಜೋಧ, (16) ರಥಿಕ (17)

ರಾಹುತ (18) ಕಾಲಾಳು ಮತ್ತು (19) ಸೇವಕ. ಈ ಎಲ್ಲ ಹತ್ತೊಂಬತ್ತು ಉನ್ನತ ಅಧಿಕಾರಿಗಳ ಮತ್ತು ಕೆಳವರ್ಗದವರ ಸಿಬ್ಬಂದಿ ಆಯ್ಕೆಗೊಳಿಸುವಲ್ಲಿ ಅನುಸರಿಸುವ ನೀತಿ ನಿಯಮಗಳು, ಆಯಾ ಹುದ್ದೆಗೆ ಇರುವ ಅರ್ಹತೆ ವ್ಯಕ್ತಿತ್ವ ಗುಣ ಸ್ವಭಾವ, ದೈಹಿಕ ಸಾಮರ್ಥ್ಯ ಮುಂತಾದ ವಿವರಗಳನ್ನು ಕುಮಾರವ್ಯಾಸ ಕವಿ ವಿದುರ ನೀತಿಯಲ್ಲಿ ಸ್ಪಷ್ಟವಾಗಿ ಸಾದರಪಸಿಡಿಸದ್ದು ಗಮನಾರ್ಹ. ಅವುಗಳನ್ನು ಈ ಮುಂದಿನಂತೆ ಗಮನಿಸಬಹುದಾಗಿದೆ.

ಪೌರೋಹಿತನನ್ನು ಆಯ್ಕೆ ಮಾಡುವಾಗ "ದಂಡ ನೀತಿ ಸ್ಮಾರ್ತಶೌಚೋದ್ದಂಡ ವೇದಾಧ್ಯಯನ ನಿಪುಣನ" ರಾಜನೀತಿ ಸ್ಮತಿಗಳಲ್ಲಿ ಪಾಂಡಿತ್ಯವಿದ್ದು, ವೇದಾಧ್ಯಯನದಲ್ಲಿ ಪರಿಣತನನ್ನು, ಶಾಂತಿಕರ್ಮ ಪೌಷ್ಠಿಕ ಕರ್ಮಗಳಲ್ಲಿ ಗುರುವಾಗಿರುವ, ಮಂತ್ರಶಾಸ್ತ್ರಾಜ್ಞನನ್ನು ಪೌರೋಹಿತನನ್ನಾಗಿ ಪರಿಗಣಿಸಬೇಕೆಂದು ವಿದುರನು ಉಪದೇಶಿಸುತ್ತಾನೆ.

ರಾಜ್ಯ ನಿರ್ವಹಣೆಯಲ್ಲಿ ರಾಜನ ನಂತರದ ಸ್ಥಾನ ಮಂತ್ರಿಯದಾಗಿದ್ದು ಮಂತ್ರಿಯ ಕುರಿತು

***"ಸ್ಥೂಲ ಸೂಕ್ಷ್ಮ ಕೃತಜ್ಞನುತ್ಸವ***
***ಶೀಲನಕ್ರೋಧಿಯನ ದೀರ್ಘವಿ***
***ಶಾಲ ಸೂತ್ರಿಯ ವೃದ್ಧಸೇವಕ ಸತ್ಯವಾಕ್ಶುಚಿಯ***
***ಕಾಲವೇದಿವಿನೀತನ ವ್ಯಸ***
***ನಾಳಿ ಸೂರಿ ರಹಸ್ಯ ಸತ್ಕೃತಿ***
***ಪಾಲನಾನ್ವಿತ ಮಂತ್ರಿಯುಂಟೇ ರಾಯನಿನಗೆಂದ"***

ಒಂದು ಕಾರ್ಯದ ಸ್ಥೂಲ ಸೂಕ್ಷ್ಮತೆಗಳ ಅರಿವು ಇದ್ದು, ಶಾಂತ ಸ್ವಭಾವದಿಂದ ಉತ್ಸಾಹಿಯಾದ ವ್ಯಕ್ತಿತ್ವ, ಕೋಪವಿಲ್ಲದವನಾಗಿದ್ದು, ಕೆಲಸ ಕಾರ್ಯ ನಿರ್ವಹಣೆಯಲ್ಲಿ ಕಾಲಹರಣ ಮಾಡದೇ, ಸತ್ಯವಂತನು ಕೈಯಿಂದ ಬಾಯಿಂದ ಶುದ್ಧವಾಗಿರುವವನೂ, ಲಂಚಕ್ಕೆ ಆಸೆಪಡೆಯದೇ ಇರುವವನೂ, ವ್ಯಸನಗಳಿಗೆ ಸಿಲುಕದವನೂ ಮಂತ್ರಿಪದವಿಗೆ ಸೂಕ್ತನೆನ್ನುತ್ತಾನೆ.

ಸೇನಾಧಿಪತಿಯ ವಿಷಯವಾಗಿ "ತುರಗ ಗಜಭಟರಳವರಿವ ಸಂಗರ ಮಹೋತ್ಸಾಹನಜಿತ ಶ್ರಮನರಿಕಟಭೇದಕ ನಾನಾಯುಧ ವಿಶಾರದನ" ಕುದುರೆ, ಆನೆ, ಭಟರ ಶಕ್ತಿಬಲಾಬಲಗಳನ್ನು ತಿಳಿದುಕೊಂಡಿರುವವನು, ರಣೋತ್ಸಾಹವನ್ನು ಹೊಂದಿರುವವನನ್ನು, ಆಯಾಸ ದಣಿವರಿಯದವನನ್ನು, ಶತ್ರು ಸೈನ್ಯವನ್ನು ಭೇದಿಸಿ ಗೆಲ್ಲಬಲ್ಲ ಸ್ವಾಮಿ ಭಕ್ತನನ್ನು ಸೇನಾಪತಿಯನ್ನಾಗಿ ನೇಮಿಸಲು ಯೋಗ್ಯವೆಂದು ತಿಳಿಸುತ್ತಾನೆ.

ಸಂಧಿವಿಗ್ರಹಿ ಹುದ್ದೆಗೆ ಇರಬೇಕಾದ ಅಗತ್ಯವನ್ನು ವಿದುರನು ಸೂಚಿಸುತ್ತಾ "ತಿಳಿದವನ ಮತಿವಿದನ ಭಾಷಾವಳಿ ಲಿಪಿಜ್ಞನ ಸಾಕ್ಷರನ ಮಂಡಳಿಕ ಸಾವಂತರ ವಿಸೇಷದಲವಸರವನರಿದು" ಸಂಧಿ ವಿಗ್ರಹಯಾಗುವವನು ವಿದೇಶಾಂಗ ವ್ಯವಹಾರದಲ್ಲಿ ತೊಡಗಿಕೊಂಡಿರಬೇಕಾದ ಕಾರಣ ಆತನು ವಿವೇಚನಾಶೀಲನೂ, ಬುದ್ಧಿವಂತನೂ, ವ್ಯವಹಾರದಲ್ಲಿ ನೈಪುಣ್ಯಶಾಲಿಯೂ, ಬಹುಭಾಷೆಗಳ ಜ್ಞಾನ, ಅದರಂತೆ ಬಹುಲಿಪಿಗಳ ತಿಳುವಳಿಕೆಯೂ, ಮಾಂಡಲಿಕರ ಸಾಮಂತರುಗಳನ್ನು ಭೇಟಿ ಮಾಡುವ ಅವರನ್ನು

ಕರೆಸಿಕೊಂಡು ಮಾತನಾಡುವ ಶಕ್ತಿಯುಳ್ಳವನನನ್ನು ಹಿಡಿದ ಕಾರ್ಯವು ಸುಲಭವೋ, ಕಾರ್ಯ ಸಂಕೀರ್ಣವೋ, ಎನ್ನುವುದರ ಕುರಿತು ವಿವೇಚನೆಯುಳ್ಳವನೂ ಆಗಿರಬೇಕೆಂದು ವಿದುರನು ಅಭಿಪ್ರಾಯ ಪಟ್ಟಿರುವುದನ್ನು ಕಾಣುತ್ತೇವೆ.

ಕೋಶಾಧಿಕಾರಿಯ ಹುದ್ದೆಗೆ ಇರಬೇಕಾದ ಅಗತ್ಯವನ್ನು "ಮಿಸುಪಮಣಿಗಣಲೋಹ ಕಾಂಚನ ವಿಸರಬೇಧವನರಿವ ಕೊಟ್ಟುದನಸಿಯಲೀಯದೆ ತಾನು ಭಕ್ಷಿಸದಹಿ" ಹೊಳೆಯುವ ರತ್ನ ಚಿನ್ನ ಕಬ್ಬಿಣ ಈ ಮುಂತಾದವುಗಳ ಪರೀಕ್ಷೆಯಲ್ಲಿ ಪರಿಜ್ಞಾನವುಳ್ಳವನೂ, ತನ್ನ ಅಧೀನಕ್ಕೆ ಬಂದ ಸಂಪತ್ತನ್ನು ಸರ್ಪದಂತೆ ಕಾಯುವವನೂ, ಸಂಪತ್ತನ್ನು ತಾನಾಗಲಿ, ಪರರಾಗಲಿ ಉಪಯೋಗಿಸಲು ಆಸ್ಪದ ನೀಡದೆ ರಕ್ಷಿಸುವ ಗುಣವುಳ್ಳವನಾಗಿರಬೇಕೆಂದು ಅಭಿಪ್ರಾಯ ಪಟ್ಟಿರುವುದನ್ನು ನೋಡಬಹುದು.

ತಾಂಬೂಲಧಾರಕನ ಕುರಿತು ***"ಮನವಚನಕಾಯದಲಿ ದಾತಾರನ ಹಿತವನುಳ್ಳನ ವಿನೀತನ ವಿನುತ ವನಿತಾನತಮುಖನ ನಿಷ್ಕಳಿತ ರೋಷಕದ ಮುನಿವವರ ಬುದ್ಧಿಯಲಿ ಸಿಲುಕದವನ"*** ಎಲೆ ಅಡಿಕೆ ಸಿದ್ಧಪಡಿಸುವ ಕಾರ್ಯದ ಸೇವೆಯಲ್ಲಿರುವವನು ತನ್ನ ರಾಜನ ಹಿತ ಕಾಯುವವನಾಗಿದ್ದು, ವಿಧೇಯನೂ ಆಗಿದ್ದು, ಸ್ತ್ರೀಯರನ್ನು ಕಂಡೊಡನೆ ತಲೆ ತಗ್ಗಿಸುತ್ತಾ ನಮಸ್ಕಾರ ತಿಳಿಸುವವನೂ, ರೋಪವನ್ನು ಪ್ರಕಟಿಸದೆ ಕೋಪರಹಿತನಾಗಿ, ಶತ್ರುಗಳ ಸಂಚಿಗೆ ಬಲಿಯಾಗದಿರುವನೂ ಆಗಿರುವುದು ಉಪಯುಕ್ತವೆನ್ನುತ್ತಾನೆ.

ಸೂಪಕಾರನನ್ನು ನೇಮಿಸುವಲ್ಲಿ ರಾಜ "ಪಿತೃಪಿತಾಮಹನ ಸೂಪಶಾಸ್ತ್ರಾಯುತನ ಕೈಕರಣೆಗಳಲಧಿಕನ ನತಿಶುಚಿಯಸಾಧಕನಕ್ರೋದಿ ಯನನಾಲಸನ ಪತಿಹಿತನ ಷಡುರಸ ವಿಶೇಷಾ ನ್ವಿತನ" ಪಿತೃಪಿತಾಮಹರಾದಿಯಾಗಿ ಮನೆತನ ದಿಂದ ವಂಶಪಾರಂಪರ್ಯವಾಗಿ ಅಡುಗೆ ಕಾರ್ಯ ಮಾಡುವವನಾಗಿದ್ದು, ಅತಿಶುಚಿಯಿಂದ ಅಡುಗೆ ಸಿದ್ಧತೆಯಲ್ಲಿ ಭಾಗಿಯಾಗುವವನ್ನು, ಕೋಪ, ಅಲಸ್ಯ ದಿಂದ ಇರದೆ ಒಡೆಯನ ಹಿತವನ್ನೇ ಬಯಸುವ ವನಾಗಿದ್ದು, ಸಿಹಿ, ಹುಳಿ, ಉಪ್ಪು, ಕಾರ, ಒಗರು ಮತ್ತು ಕಹಿ ಈ ಎಲ್ಲ ಷಡ್ರಸಗಳೊಂದಿಗೆ ಅಡುಗೆ ಕಾರ್ಯದಲ್ಲಿ ತೊಡಗಿರುವವನು ಸೂಪಕಾರನನ್ನಾಗಿಯೋಜಿಸಬೇಕು ಎಂದು ಹೇಳಲಾಗಿದೆ.

ಪಾನೀಯಧಾರಕನನ್ನು ನಿಯೋಜಿಸುವಾಗ ಪಾನಕ, ಷರಬತ್ತು, ಮಜ್ಜಿಗೆ ಮುಂತಾದ ಪಾನೀಯಗಳನ್ನು ಸಿದ್ಧಪಡಿಸಲು ನುರಿತವನೂ, ಉತ್ತಮ ಸುಗಂಧವನ್ನು ಹೊಂದಿದ ಗಂಧದ ದ್ರವ್ಯದೊಡನೆ ಜೋಡಿಸಿದ ಜೀವನವೇ ತನ್ನದೆಂದು ತಿಳಿದು ದೊರೆಗೆ ಪಾನೀಯವನ್ನು ನೀಡಿ "ತಾಭೋಗಿಸದೆ ಬಳಸದೆ ರಾಜನೋಲಗಿಸುವವನೆ" ಪಾನೀಯದಾರಕನೆಂದು ಪ್ರಸ್ತುತ ಪಡಿಸಿದ್ದನ್ನು ನೋಡಬಹುದು.

ಪಡಿಹಾರಕನ ಆಯ್ಕೆಗೆ "ಉನ್ನತನ ರೂಪಾಧಿಕನ ಸಂಪೂರ್ಣ ದಕ್ಷನನ್ಯರೆನ್ನವರೆನ್ನದವನ ಪರರಿಂಗೀತಾಕಾರ ಪ್ರಭೇದಕನ ಮನ್ನಣೆಗೆ ಬೆರೆಯದನನಾಪ್ತನ" ಸಂಬಂಧಿಸಿದಂತೆ ವ್ಯಕ್ತಿಯು ಎತ್ತರವಾಗಿ ನೀಳವಾದ ದೇಹದ ಆಕೃತಿಯುಳ್ಳವವನನ್ನು, ಅಧಿಕವಾದ ರೂಪವಂತನನ್ನು, ಸಂಪೂರ್ಣವಾಗಿ ದಕ್ಷನೆನಿಸುವವನ್ನು ಇವರು ನನ್ನವರು, ಇವರು ಪರರು ಎಂಬ ಭೇದವಿಲ್ಲದೆ ಇರುವವನನ್ನು, ಒಬ್ಬ ವ್ಯಕ್ತಿಯನ್ನು ನೋಡಿದಕ್ಷಣ ಅವರವರ ಮನೋಗತವನ್ನು ತಿಳಿಯಬಲ್ಲ ಸೂಕ್ಷ್ಮಗ್ರಾಹಿಯಾಗಿರುವವನನ್ನು, ಸ್ತುತಿಗೆ ಮರುಳಾಗದವನನ್ನು, ತನ್ನ ಶ್ರಮವನರಿಯದೆ ದಕ್ಷತೆಯಿಂದ ಕಾರ್ಯನಿರ್ವಹಿಸುವವನು ಪಡಿಹಾರಕ, (ಪ್ರತಿಹಾರಕ, ದ್ವಾರಪಾಲಕ)ನನ್ನಾಗಿ ನೇಮಿಸಲು ತಿಳಿಸುತ್ತಾನೆ.

ಮಲ್ಲರನ್ನು ಆಯ್ಕೆ ಮಾಡಿಕೊಳ್ಳಬೇಕಾದಾಗ "ಸ್ಥಾಯಿಯಲಿ ಸಂಚಾರದಲಿ ಸಮಗ್ರೈಯೆನಿಸಿ ನಾನಾವಿನೋದದದಾಯವರಿವವನವನೆ ಮಲ್ಲನು"

ಎದುರಾಳಿಗೆ ಪೆಟ್ಟು ಹಾಕುವ ವಿಧಾನವನ್ನು, ವರೆಸೆಗಳನ್ನು ವಿವಿಧೋಪಾಯಗಳನ್ನು ಆಶ್ರಯಿಸಿ ದೇಹದ ಅಂಗಾಗಗಳನ್ನು ಹೊಸ ಹೊಸ ವಿಧದಲ್ಲಿ ತಿರುಗಿಸಿ ನಿಲ್ಲುವ, ನಾನಾ ವಿಧದ ಚಮತ್ಕಾರದ ಪಟ್ಟುಗಳನ್ನು ಬಲ್ಲವವನ್ನು ಮಲ್ಲನನ್ನಾಗಿ ಪರಿಗಣಿಸಬೇಕೆಂದು ವಿವರಿಸಲಾಗಿದೆ.

ಚರಮದಾರಕ, ಚಮರಧಾರಿಗ ಅಥವಾ ಚಾಮರದ ಆಳನ್ನು ನಿರ್ಧರಿಸುವಾಗ

*"ಎಡಬಲನನಾರೈವುತೊಬ್ಬನ*

*ಬಿಡದೆ ನೋಡುತ ಮಕ್ಷಿಕಂಗಳ*

*ಗಡವಣವನು ಕೆದರಿಸುತ ಕಿಗ್ಗಣಿಕ್ಕೆಕೆಲಬಲನ*

*ಜಡಿದು ನೂಕುವ ಸ್ವಾಮಿಕಾರ್ಯದ"*

ಚಮರಮೃಗದ ಬಾಲದ ಕೂದಲಿನಿಂದ ತಯಾರಿಸಿದ ಕುಂಚ ಹಿಡಿದ ಚಮರಧಾರಿಗನು ತನ್ನ ಕಾರ್ಯದಲ್ಲಿ ಎಡಬಲಗಳನ್ನು ಕಣ್ಣಲ್ಲಿ ಕಣ್ಣಿಟ್ಟು, ಒಡೆಯನ ಕಡೆಗೆ ತೀಕ್ಷ್ಣ ದೃಷ್ಟಿ ಹರಿಸಿ, ದಾರಿಯಲ್ಲಿ ಸಾಗುವಾಗ ಮುತ್ತುವ ನೊಣಗಳ ಗುಂಪನ್ನು ಚದುರಿಸಿ, ಎಡಬಲ ಜನರು ಬರದ ಹಾಗೆ ತಡೆಯಲು ಸಮರ್ಥನಾಗಿದ್ದು, ಸ್ವಾಮಿ ಕಾರ್ಯದಲ್ಲಿ ನಿಷ್ಠನಾಗಿರುವವನನ್ನು ಚಮರಧಾರಕನನ್ನಾಗಿ ಆಯ್ಕೆ ಮಾಡಲು ಸೂಕ್ತವೆಂದು ತಿಳಿಸಿರುವುದು ವಿಶೇಷ.

ಛತ್ರಿಧಾರಕನು ರಾಜನ ತಲೆಯ ಮೇಲೆ ಕೊಡೆ ಹಿಡಿಯುವ ಕಾರ್ಯದವನಾಗಿದ್ದು

*"ಗುಳಿತೆವರನೀಕ್ಷಿಸುತ ಬಟ್ಟೆಯ*

*ಮೆಳೆ ಮರಂಗಳ ಹೊಯ್ಲು ತಪ್ಪಿಸಿ*

*ನೆಳಲನರಸುತ ವೇಗಗತಿ ಸಾಮಾನ್ಯ ಗತಿಗಳಲಿ*

*ಬಳಿವಿಡಿದು ಭೂಜುಜರಯಾನಂ*

*ಗಳೊಳಗಳುಕದೆ ಢಗೆಯ ಸೈರಿಸಿ*

*ಬಳಸುವವನೇ ಛತ್ರ ಧಾರಕನರಸಕೇಳೆಂದ"*

ಛತ್ರಿಧಾರಕನು ದಾರಿಯಲ್ಲಿ ಸಾಗುವಾಗ ಏರು ತಗ್ಗುಗಳನ್ನು ಮೆಳೆ ಮರಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಗಮನಿಸಿ ಅಂತಹ ಹೊಯ್ಲನ್ನು ತಪ್ಪಿಸಿ ರಾಜನನ್ನು ಕರೆದುಕೊಂಡು ಹೋಗಬಲ್ಲವನು ಸ್ವಾಮಿಗೆ ನೆರಳಾಗುವುದನ್ನೇ ಗುರಿಯಾಗಿಟ್ಟುಕೊಂಡು, ಸಮಯಕ್ಕೆ ಸರಿಯಾಗಿ ವೇಗದಿಂದ ಸಾವಧಾನದಿಂದ ನಡೆಯುತ್ತ ತನಗೆ ಬಿಸಿಲಿನ ತಾಪವಾದರೂ ಸೈರಿಸಿಕೊಂಡು ಇರುವವನನ್ನು ಛತ್ರಧಾರಕನಾಗಿ ಸೇವೆಗೆ ಆಯ್ಕೆ ಮಾಡಿಕೊಳ್ಳಬೇಕು.

ಆಪ್ತಸೇವಕನ ಅಥವಾ ಅಂಗರಕ್ಷಕನಾಗುವವನನ್ನು "ಹರುಷದಲಿ ನಿಜಜನನಿಗರ್ಭವಧರಿಸಿ ಕೊಂಡಾಡುವವೊಲುತ್ತಮಪುರುಷರಂತರ್ಯಾಮಿಯನುತಾಳ್ವಂತೆ" ನಿಯೋಜಿಸಬೇಕಾದಾಗ ಅವನು

ಗರ್ಭವತಿಯಾದ ಹೆಣ್ಣು ತನ್ನ ಗರ್ಭದಲ್ಲಿರುವ ಶಿಸುವನ್ನು ಪಾಲಿಸುವಂತೆ, ಯೋಗಿಗಳು ಪರಮಾತ್ಮನನ್ನು ತಮ್ಮ ಹೃದಯದಲ್ಲಿ ಧರಿಸಿ, ಧ್ಯಾನಿಸುವಂತೆ, ತಮ್ಮ ಒಡೆಯನನ್ನು ಗಮನದಲ್ಲಿಟ್ಟು ಕಾಯುತ್ತ ಹಾನಿಯಾಗದಂತೆ, ಏಳಿಗೆಯನ್ನು ಒದಗಿಸಿಕೊಡುವವನನ್ನು ಅಂಗರಕ್ಷಕನಾಗಲು ತಕ್ಕವನೆಂದು ತಿಳಿಯುತ್ತದೆ.

ವಾಹಕನನ್ನಾಗಿ ಯಾವ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕೆಂದರೆ

***"ಅವನಿಪಾಲರದಂದುಗದ ಹೊತ್ತಿನಲಿಗಜಹಯ,***

***ವೃಂದವನೆ ಚಾಚುವನು ವಾಹಕನರಸ ಕೇಳೆಂದ"***

ಆಪತ್ತಿನ ಸಂದರ್ಭದಲ್ಲಿ ಹಿಂದೆ ಮಾಡಿದ ಪುಣ್ಯದ ಫಲವು ಬಂದು ಕೈ ಸೇರುವ ರೀತಿಯಲ್ಲಿ ಆಪತ್ತು ಬಂದಾಗ ರಕ್ಷಣೆಗೆ ಧಾವಿಸುವ ಶ್ರೀ ಹರಿಯಂತೆ ವಾಹಕನು ಆನೆ ಕುದುರೆಗಳ ಹಿಂಡನ್ನು ನೆರವಿಗೆ ತಂದು ರಾಜನನ್ನು ರಕ್ಷಿಸುವವನು ವಾಹಕನು. ಇಂಥವನನ್ನು ಪರಿಗಣಿಸಲು ಯೋಗ್ಯವೆಂದು ತಿಳಿಸಿದ್ದಾನೆ.

ಜೋಧನನ್ನಾಗಿ ಯಾವ ವ್ಯಕ್ತಿಯನ್ನು ಪರಿಗಣಿಸಬೇಕೆಂದು

***"ಪರ್ವತವನೊಡೆದುಳಿಸಿ ಭೂಮಿಯ***

***ನಿಬ್ಬಗೆಯೆ ಮಾಡಿಸುತ್ತ ರಥಗಜ***

***ದೊಬ್ಬುಳಿಯ ಹರೆಗಡಿಸಿ ಕಾದಿಸುತಾನೆಗಳ***

***ಮೇಲೆಬೊಬ್ಬಿರಿದು ಶರವಳೆಯ ಸುರಿಸುರಿ***

***ದುಬ್ಬರದ ಬವರದೊಳಗಹಿತರಿ***

***ಗುಬ್ಬಸವನೆಸುವವನ ಜೋಧನ..."***

ಪರ್ವತನನ್ನು ಒಡೆಯುವನೋ, ಭೂಮಿಯನ್ನು ಸೀಳುವನೋ ಎನ್ನುವ ರೀತಿಯಲ್ಲಿ ಮುನ್ನುಗ್ಗಿ, ವೈರಿ ರಾಜರ ರಥ ಗಜಾದಿಗಳನ್ನು ಚದುರಿಸಿ, ಆನೆಗಳನ್ನು ಲಕ್ಷಿಸದೆ ಶರಗಳನ್ನು ಮಳೆಗರೆಯುತ್ತಾ ಶತ್ರುರಾಜರಿಗೆ ಉಬ್ಬಸವನ್ನು ತಂದೊಡ್ಡುವವನ್ನು ಜೋಧನನ್ನಾಗಿ ನೇಮಿಸಲು ಸೂಕ್ತವೆಂದು ವಿದುರನು ತಿಳಿಯಪಡಿಸಿದ್ದಾನೆ.

ರಥಿಕನಾಗಬೇಕಾದರೆ

***"ಕುದುರೆಗಳನಾರೈದುರಥವನು***

***ಹದುಳಿಸುತ ಸಾರಥಿಯನೊಲವು***

***ತ್ತಿದಿರ ಮುರಿವುತ ತನ್ನ ಕಾಯಿದುಕೊಳುತ ಕೆಲಬಲನ***

***ಸೆದೆದು ಮರಳುವಲಾಗು ವೇಗದ***

***ಕದನ ಕಾಲಾನಲವನು"***

ರಥಿಕನು ತನ್ನ ಕುದುರೆಗಳ ಪರೀಕ್ಷೆಗಳಲ್ಲಿ ಗಟ್ಟಿಗನಾಗಿ ರಥವನ್ನು ರಕ್ಷಿಸಿಕೊಳ್ಳುತ್ತ, ಸಾರಥಿಯನ್ನು ಪ್ರೋತ್ಸಾಹಿಸುತ್ತ, ವೈರಿಗಳನ್ನು ಸಂಹರಿಸುತ್ತ, ತನ್ನನು ತಾನು ಕಾಪಾಡಿಕೊಳ್ಳುತ್ತ, ಎಡಬಲಗಳನ್ನು ಸೆದೆಬಡಿದು ಹೋರಾಡಿ ಹಿಂತಿರುಗಿ ಬರುವವನನ್ನು ರಥಿಕನನ್ನಾಗಿ ನೇಮಿಸಬೇಕೆನ್ನುತ್ತಾನೆ.

ರಾವುತನ ನೇಮಕದಲ್ಲಿ

***"ಬಿಟ್ಟ ಸೂಟಿಯಲರಿನೃಪಾಲರ***

***ಮುಟ್ಟಿ ಮೂದಲಿಸುತ್ತ ಮೋಹಿದ***

***ಥಟ್ಟನೊಡೆ ಹಾಯ್ದಹಿತ ಬಲದೊಳಗಾನೆ ವರಿವರಿದು***

***ಹಿಟ್ಟುಗುಟ್ಟುತ ಹೆಣನ ವಟ್ಟಾ***

***ವಟ್ಟಿ ಮಸಗಲು"***

ಶತ್ರುಸೇನೆಯಲ್ಲಿ ಮುನ್ನುಗ್ಗಿ ವೈರಿಗಳನ್ನು ಜರಿದು ಮೊದಲಿಸುತ್ತಾ, ಅವರನ್ನು ತರಿತರಿದು ಹೆಣಗಳ ರಾಶಿಯನ್ನು ಸೇರಿಸಬಲ್ಲವನು ರಾವುತನಾಗಲು ಸೂಕ್ತನೆಂದು ವಿದುರನು ತನ್ನ ಉಪದೇಶದಲ್ಲಿ ತಿಳಿಸಿದುದು ವಿಶೇಷ.

ಕಾಲಾಳು ಆಯ್ಕೆಯಲ್ಲಿ

***"ಬೇಸರದೆ ಕಾಳೋರಗನನ***

***ಡ್ಡೈಸಿ ಕಟ್ಟಿರುವೆಗಳು ಖಂಡವ***

***ಸೂಸಿ ಕಡಿಕಡಿದೊಟ್ಟಿ ದಂದಲ ಹಿತ ಬಲದೊಳಗೆ***

***ಓಸರಿಸದೊಳ ಹೊಕ್ಕು ಸಮರವಿ***

***ಳಾಸವನು ನೆರೆಮರೆದು ಕೇಶಾ***

***ಕೇಶಿಗೊದಗುವವನೆ ಕಾಲಾಳರಸಕೇಳೆಂದ"***

ಕಾಲಾಳು ಆಯ್ಕೆಯಲ್ಲಿ ಕಟ್ಟಿರುವೆಗಳು ಕಾಳಸರ್ಪವನ್ನು ಅಡ್ಡಗಟ್ಟಿ ಮುತ್ತಿ ಕಡಿಕಡಿದು ತೊಂದರೆ ನೀಡುವಂತೆ, ಹಿಂದೆ ಸರಿಯದೆ ವೈರಿ ಸೇನೆಯಲ್ಲಿ ಮುನ್ನುಗ್ಗಿ ಸಮರ್ಥರಾದ ವೈರಿಗಳನ್ನು ಆಕ್ರಮಿಸಿ ಕೇಶಾಕೇಶಿಯಾಗಿ ಕದನವನ್ನು ಕೈಗೊಳ್ಳಲು ಯೋಗ್ಯನಾದವನು ಕಾಲಾಳು ಆಗಲಿಕ್ಕೆ ತಕ್ಕವನೆಂದು ತಿಳಿಸಿದ್ದಾನೆ.

ಸೇವಕನ ಆಯ್ಕೆ ಸಂದರ್ಭದಲ್ಲಿ

***"ಬರಲು ಕಂಡಡೆ ವಂದಿಸುತಲಂ***

***ತರಿಸಿಮಿಗೆ ಹತ್ತಿರವೆನಿಸದತಿ***

***ತರದದೂರವ ಸಾರದೀಪಂ ಮಧ್ಯಗತನೆನಿಸಿ***

***ಪರಿವಿಡಿಯಲೋಲಗಿಸುತರಸನ***

***ಸಿರಿಮೊಗವನೀಕ್ಷಿಸುತ ಬೆಸಸಿದ***

***ನರವರಿಸದಾಕ್ಷಣಕೆ ಮಾಡುವವನೆ ಸೇವಕನು"***

ಸೇವಕನ ನೇಮಕ ವಿಚಾರದಲ್ಲಿ ರಾಜನು ಬರುವುದನ್ನು ಕಂಡೊಡನೆ ವಂದಿಸಿ, ಅವನಿಗೆ ಹತ್ತಿರದಲ್ಲಾಗಲಿ, ದೂರದಲ್ಲಾಗಲಿ ಇರದೆ ಮಧ್ಯವರ್ತಿಯಾಗಿ ನಿಂತಿದ್ದು, ರಾಜನ ಮುಖದಲ್ಲಿಯೇ ದೃಷ್ಟಿಯಿರಿಸಿ ಅವನ ಆಶಯವನ್ನು ತಿಳಿಯಲು ಸಮರ್ಥನಾಗಿದ್ದು, ಆಜ್ಞೆಯನ್ನು ಇತ್ತರೆ ತಕ್ಷಣ ನಡೆಸಿಕೊಡುವವನು ಸೇವಕನಾಗಲಿಕ್ಕೆ ಯೋಗ್ಯನೆಂದು ವಿದುರನು ತಿಳಿಸುತ್ತಾನೆ

ಈ ರೀತಿಯಲ್ಲಿ ಕುಮಾರವ್ಯಾಸನು ವಿದುರನೀತಿಯ ಅನ್ವಯ ರಾಜನು ತನ್ನ ಅಧೀನದ ಆಡಳಿತವು ಸುಲಭವಾಗಿ ಸಾಗಲು ಅಧಿಕಾರಿ ವರ್ಗವನ್ನು ನೇಮಕ ಮಾಡುವ ಸಂದರ್ಭದಲ್ಲಿ ಆಯಾ ಹುದ್ದೆಗಳಿಗುಣವಾಗಿ ಪ್ರತ್ಯೇಕವಾದ ಮಾನದಂಡಗಳನ್ನು ಅನುಸರಿಸಬೇಕೆಂದು ತಿಳಿಯಪಡಿಸಿದುದು ಗಮನಾರ್ಹ.

ಮಂತ್ರಿ, ಸೇನಾಪತಿ, ಕೋಶಾಧಿಕಾರಿ ಮತ್ತು ಸಂಧಿವಿಗ್ರಹಿ ಈ ಮುಂತಾದ ಉನ್ನತ ಅಧಿಕಾರಿಗಳ ನೇಮಕಾತಿಯಲ್ಲಿ ರಾಜನು ಆಯಾ ಪದವಿಗಳ ನೇಮಕದಲ್ಲಿ ವಿದ್ಯಾರ್ಹತೆ, ಸೇವಾನುಭವ, ವ್ಯಕ್ತಿತ್ವ, ಉತ್ತಮ ಶೀಲಚಾರಿತ್ರಯವುಳ್ಳವರನ್ನು, ವಿದ್ವಾಂಸರುಗಳನ್ನು ಪರಿಗಣಿಸಿ ಮಂತ್ರಿ ಪದವಿಯನ್ನು ನೀಡಲು ಯೋಗ್ಯವೆಂದು ಅಭಿಪಾಯಪಟ್ಟಿರುವುದನ್ನು ಕಾಣುತ್ತೇವೆ. ಹಾಗೆಯೇ ಕೋಶಾಧಿಕಾರಿಗಾಗಿ, ರತ್ನ, ಲೋಹ, ಬಂಗಾರ ಮುಂತಾದವುಗಳನ್ನು ಪರೀಕ್ಷಿಸುವ ನೈಪುಣ್ಯತೆಯುಳ್ಳವನನ್ನು ಭಂಡಾರದ ಸಂಪತ್ತನ್ನು ಸರ್ಪದಂತೆ ಸಂರಕ್ಷಣೆ ಮಾಡುವ ಅರ್ಹನನ್ನು ಹುಡುಕಿ ಪದವಿ ನೀಡಲು ಸೂಕ್ತವೆಂದು ವಿದುರ ನೀತಿ ಸ್ಪಷ್ಟಪಡಿಸುತ್ತದೆ.

ಸೇನಾಪತಿ ಪದವಿಗಾಗಿ ನಡೆಯುವ ಆಯ್ಕೆಯಲ್ಲಿ ಚತುರಂಗಬಲದ ಬಲಾಬಲವನ್ನು ತಿಳಿದುಕೊಳ್ಳುವ ರಣರಂಗದಲ್ಲಿ ಯುದ್ಧೋತ್ಸಾಹವುಳ್ಳವನನ್ನು, ವೈರಿಗಳನ್ನು ಸಂಹರಿಸುವ ಉತ್ಸಾಹಶಾಲಿಯನ್ನು, ಸ್ವಾಮಿನಿಷ್ಠನನ್ನು ಸೇನಾಪತಿಯನ್ನಾಗಿ ನಿಯೋಜಿಸುವುದು ಸೂಕ್ತವೆಂದು ತಿಳಿಸಲಾಗಿದ್ದು ಪ್ರಸ್ತುತವೇ ಆಗಿದೆ. ವಿದೇಶಾಂಗ ವ್ಯವಹಾರವನ್ನು ನೋಡಿಕೊಳ್ಳುವ ಸಂಧಿವಿಗ್ರಹಿಯು ಬಹುಭಾಷೆಗಳ ತಿಳುವಳಿಕೆ, ಹಾಗೆಯೇ ಬಹುಲಿಪಿಗಳ ಪರಿಜ್ಞಾನ, ಸಮಯಾನುಸಾರ ಪರಿಸ್ಥಿತಿಗನುಗುಣವಾಗಿ ಕಾರ್ಯದ ಯುಕ್ತಾಯುಕ್ತತೆಗಳ ಅರಿವುಳ್ಳವನನ್ನು, ಕುಶಲಿಯನ್ನು ಸಂಧಿವಿಗ್ರಹಿ ಎಂದು ನೇಮಕ ಮಾಡಿದರೆ ರಾಜನ ಆಡಳಿತ ಸುಗಮ ಎಂಬ ಅಭಿಪ್ರಾಯ ಉಚಿತವಾಗಿದೆ.

ಅಧಿಕಾರೇತರ ಸಿಬ್ಬಂದಿಯವರಾದ ಸೂಪಕಾರ, ತಾಂಬೂಲಧಾರಕ ಪಾನೀಯಧಾರಕ ಮುಂತಾದ ಪದವಿಗೆ ಬೇಕಾದ ಸಿಬ್ಬಂದಿಯವರನ್ನು ನೇಮಿಸುವಾಗ ಮನೆತನದಿಂದ ಸಂಬಂಧಿಸಿದ ಕೆಲಸ ಕಾರ್ಯಗಳಲ್ಲಿ ನುರಿತ ಹಿರಿಯ ವ್ಯಕ್ತಿಗಳನ್ನು ಮೆಲ್ಕಂಡ ಕೆಲಸಗಳಿಗೆ ನಿಯೋಜಿಸುವುದು ಉಪಯುಕ್ತವೆಂದು ವಿದುರನೀತಿ ತಿಳಿಸುವುದು ಯೋಗ್ಯವೇ ಆಗಿದೆ.

ದ್ವಾರಪಾಲಕ, ಚಮರಧಾರಿಗ ಮತ್ತು ಛತ್ರಿಧಾರಕ ಕೆಲಸಗಳಿಗೆ ತಕ್ಕಂತೆ ದೈಹಿಕ ಸಾಮರ್ಥ್ಯವುಳ್ಳ ಸದೃಢನನ್ನು, ವ್ಯಕ್ತಿಯು ತನ್ನವ, ಬೇರೆಯವ ಎಂಬ ಭಾವವಿಲ್ಲದ, ಸೂಕ್ಷ್ಮ ಗ್ರಾಹಿಯನ್ನು ದ್ವಾರಪಾಲಕನನ್ನಾಗಿ, ರಾಜನ ಕಡೆಗೆ ಲಕ್ಷ್ಯವಿರಿಸಿ ದಾರಿಯಲ್ಲಿ ನಡೆಯುವಾಗ ನೊಣ ಮೊದಲಾದವುಗಳನ್ನು ದೂರಸರಿಸಿ ದಾರಿಯಲ್ಲಿ ನಡೆವಾಗ ಎಡಬಲದ ಜನರನ್ನು ತಡೆದು ಕೆಲಸ ನಿರ್ವಹಿಸುವವನು

ಚಮರಧಾರಿಗನಾಗಲು ಸೂಕ್ತ ಎಂದಿದ್ದು, ಛತ್ರಿಧಾರಕನು ತನ್ನ ಕಾರ್ಯದಲ್ಲಿ ಏರುತಗ್ಗು ಮೆಳೆ ಮರಗಳನ್ನು ಗಮನಿಸಿ ಅವುಗಳನ್ನು ತಪ್ಪಿಸಿ ಸುಗಮವಾಗಿ ಪ್ರಯಾಣಕ್ಕೆ ಅನುವು ಮಾಡಿಕೊಂಡು ರಾಜನಿಗೆ ಸದಾ ನೆರಳಾಗಿ ಸೇವೆ ಸಲ್ಲಿಸುವನನ್ನು ಛತ್ರಿಧಾರಕನಾಗಲು ಯೋಗ್ಯವೆಂದು ತಿಳಿಸಿದ್ದು ಗಮನಾರ್ಹ ವಿಚಾರ.

ಯುದ್ಧ ಭೂಮಿಯಲ್ಲಿ ಮಲ್ಲ, ಜೋಧ, ರಾವುತ, ರಥಿಕ, ಕಾಲಾಳು, ವಾಹಕ, ಆಪ್ತಸೇವಕ ಮತ್ತು ಸೇವಕ ಈ ಸೇವೆಗೆ ಬೇಕಾದ ಸಿಬ್ಬಂದಿಗಳು ತಮ್ಮ ತಮ್ಮ ಕೆಲಸಕ್ಕೆ ಅವಶ್ಯವಿರುವ ಕಾರ್ಯಗಳಲ್ಲಿ ಪರಿಣತಿ, ದೈಹಿಕ ಸಾಮರ್ಥ್ಯ,ಸ್ವಾಮಿನಿಷ್ಠೆ, ಕಾರ್ಯದಲ್ಲಿ ಎಚ್ಚರ ತಪ್ಪದಂತೆ ಉತ್ಸಾಹಶಾಲಿಯಾಗಿರುವ ಗುಣವನ್ನು ಹೊಂದಿರುವುದನ್ನು ವಿದುರ ನೀತಿಯಲ್ಲಿ ಪ್ರಸ್ತಾಪವಾಗಿದುದು ಸಮಂಜಸವಾಗಿದೆ. ಸೇವಕ ಕೆಲಸಕ್ಕೆ ಮತ್ತು ಅಂಗರಕ್ಷಕನ ಕಾರ್ಯಕ್ಕೆ ವಿಶೇಷವಾಗಿ ಒಡೆಯನ ಆಗಮನವನ್ನು ಕಣ್ಣಲ್ಲಿ ಕಣ್ಣಿಟ್ಟು ಅವರ ಆಶಯವನ್ನರಿತು ಕಾರ್ಯ ಕೈಗೊಳ್ಳುವವನು ಆಗಿದ್ದು, ಹಾಗೂ ಆಪ್ತರಕ್ಷಕನ ಕಾರ್ಯಕ್ಕೆ ರಾಜನ ಸುಖ ಸಂತೋಷಗಳೇ ತನ್ನ ಸುಖ ಸಂತೋಷ. ಆತನ ಏಳಿಗೆಯೇ ತನ್ನ ಏಳಿಗೆ ಎಂದು ಭಾವಿಸುವ ವ್ಯಕ್ತಿಯನ್ನು ಆಯ್ಕೆ ಮಾಡಿಕೊಂಡರೆ ಉಪಯುಕ್ತವೆಂಬ ವಿಚಾರ ಪ್ರಸ್ತುತವಾಗಿದೆ.

ಹೀಗೆ ರಾಜನು ರಾಜ್ಯದ ಸುಗಮ ಆಡಳಿತಕ್ಕೆ ಬೇಕಾದ ಸರ್ವ ಸಿಬ್ಬಂದಿಯನ್ನು ಅವರವರ ಕೆಲಸ ಕಾರ್ಯಕ್ಕೆ ಬೇಕಾದ ಅರ್ಹತೆ ಪರಿಣತಿ, ದೈಹಿಕಕ ಸಾಮರ್ಥ್ಯ ವ್ಯಕ್ತಿತ್ವ ಕೆಲಸದಲ್ಲಿ ಉತ್ಸುಕತೆ, ಈ ಎಲ್ಲ ಅಂಶಗಳನ್ನು ನಿರ್ಧರಿಸಿ ರಾಜನು ಅಧೀನ ಸಿಬ್ಬಂದಿಯನ್ನು ನಿಯೋಜಿಸಿಕೊಂಡು ಸದೃಢ ಆಡಳಿತ ನೀಡಲು ಸಾಧ್ಯವೆಂದು ಧೃತರಾಷ್ಟ್ರನಿಗೆ ವಿದುರನು ಉಪದೇಶ ಕೊಟ್ಟುದು ಗಮನಾರ್ಹವಾಗಿದೆ.

ಮಹಾಭಾರತದಲ್ಲಿ ಯುದ್ಧ ಪೂರ್ವದ ಸಂದರ್ಭದಲ್ಲಿ ವಿದುರನು ಧೃತರಾಷ್ಟ್ರ ಮಹಾರಾಜನಿಗೆ ನೀಡಿದ ಈ ಉಪದೇಶವು 'ವಿದುರನೀತಿ' ಎಂದು ಜನಾನುರಾಗಿಯಾಗಿದ್ದು, ವಿದುರ ಪ್ರಸ್ತಾಪಿಸಿದ ವಿವರಗಳು ಇಂದಿಗೂ ಪ್ರಸ್ತುತವಾಗಿದ್ದು, ವಿಚಾರ ಯೋಗ್ಯವೇ ಆಗಿದ್ದು ಗಮನಾರ್ಹ. ಸದೃಢ ರಾಜ್ಯದ ಒಳಿತಗಾಗಿ ಈ ಹಿನ್ನೆಲೆಯುಳ್ಳ, ಪರಿಣತಿಯುಳ್ಳ ಸಿಬ್ಬಂದಿಯನ್ನು ನಿಯೋಜಿಸಿದಲ್ಲಿ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಕಾಣಲು ಸಾಧ್ಯ. ಇಂಥ ನೀತಿ ವಿಚಾರಗಳು ಯಾವ ಕಾಲಕ್ಕೂ ಅಧ್ಯಯನ ಯೋಗ್ಯವಾಗಿರುವುದು ವಿಶೇಷ.

**ಪರಾಮರ್ಶನ ಗ್ರಂಥಗಳು:**


- ಸಿ.ಪಿ.ಕೆ. (2012). ಉದ್ಯೋಗಪರ್ವ. ಪೊಡವಿ ಪ್ರಕಾಶನ, ಮೈಸೂರು.
- ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ. (ಸಂ.). (1988). *ಕರ್ನಾಟ ಭಾರತ ಕಥಾ ಮಂಜರಿ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಯ, ಮೈಸೂರು.
- ಕೀರ್ತಿನಾಥ ಕುರ್ತಕೋಟಿ. (2010). ಕುಮಾರವ್ಯಾಸ ಭಾರತ. ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್ ಧಾರವಾಡ.
- ರಂಗನಾಥಶರ್ಮಾ, ಎನ್. (ಸಂ.). (2007). ವಿದುರನೀತಿ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.